ಗಮನಕ್ಕೆ ಬಂದಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಒಟ್ಟು 190.62 ಕಿ.ಮೀ. ಉದ್ದದ ರಸ್ತೆಗಳಿಗೆ ಡಾಂಬರು ಹಾಕಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಇ) ತಪ್ಪಿತಸ್ಥರ ಮೇಲೆ ಇಲಾಖಾ ನಿಯಮಾವಳಿಯಂತೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆ.

ಅನುಬಂಧ

1989-90, 1990-91 ಹಾಗೂ 1991-92ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಮಾಡಿರುವ ಡಾಂಬರು ಕೆಲಸದ ವಿವರಗಳು.

ಸಂಖ್ಯೆ	ತಾಲ್ಲೂಕುಗಳ ಹೆಸರು	ಡಾಂಬರೀಕರಿಸಲಾದ ರಸ್ತೆಗಳ ಉದ್ದ (ಕಿ.ಮೀ.ನಲ್ಲಿ) 1989-90 ರಲ್ಲಿ	1990-91ನೇ ಸಾಲಿನಲ್ಲಿ	1991-92ನೇ ಸಾಲಿನಲ್ಲಿ	ಒಟ್ಟು
1.	ತುಮಕೂರು	4.70	13.40	16.30	34.40
2.	ಗುಬ್ಬಿ	2.50	4.50	1.60	8.60
3.	ತಿಪಟೂರು	5.00	6.85	6.40	18.25
4.	ಚಿಕ್ಕನಾಯಕನಹಳ್ಳಿ	5.70	1.00	14.00	20.70
5.	ಕುಣಿಗಲ್	2.40	14.53	18.85	35.78
6.	ತುರುವೇಕೆರೆ	-	6.00	10.00	16.00
7.	ಶಿರಾ	3.90	12.45	13.90	30.25
8.	ಕೊರಟಗೆರೆ	-	2.70	6.55	9.25
9.	ಮಧುಗಿರಿ	0.14	3.50	4.70	8.34
10.	ಪಾವಗಡ	-	7.20	1.85	9.05
		24.34	72.13	94.15	190.62

ವಿಷಯ : ವರುಣ ಸಾಲಾ ಕಾಮಗಾರಿ ಕೆಲಸದ ಅಭಿವೃದ್ಧಿ.

Q : 1642

ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವರುಣ ನಾಲಾ ಕಾಮಗಾರಿ ಕೆಲಸ ಎಲ್ಲಿಯವರೆಗೆ ನಡೆದಿದೆ?
ಆ) 1993-94ನೇ ಸಾಲಿನ ಆಯವ್ಯಯದಲ್ಲಿ ಎಷ್ಟು ಬಿಡುಗಡೆ ಮಾಡಲಾಗುವುದು?
ಇ) ಮೈಸೂರು ಜಿಲ್ಲೆಯಲ್ಲಿ ಯಾವ ಗ್ರಾಮಗಳಿಗೆ ಇದರ ಉಪಯೋಗವಾಗುವುದು ಹಾಗೂ ಇದರಿಂದ ಎಷ್ಟು ಎಕರೆ ಜಮೀನು ನೀರಾವರಿಯಾಗುವುದು?
ಈ) ವರುಣ ನಾಲಾ ಕೆಲಸ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಮುಖ್ಯ ನಾಲೆಯು 50ನೇ ಕಿ.ಮೀ.ವರೆಗೆ ಮತ್ತು 20ನೇ ಕಿ.ಮೀ.ವರೆಗಿನ ವಿತರಣಾ ನಾಲೆಗಳು ಪೂರ್ಣಗೊಳ್ಳುತ್ತಿದೆ. ಮುಖ್ಯ ನಾಲೆಯ 50ನೇ ಕಿ.ಮೀ.ನಿಂದ 62 ಕಿ.ಮೀ.ವರೆಗಿನ ಮತ್ತು 20ನೇ ಕಿ.ಮೀ.ನಿಂದ 50ನೇ ಕಿ.ಮೀ.ವರೆಗಿನ ವಿತರಣಾ ನಾಲೆಗಳು ಹಾಗೂ 18ನೇ ಕಿ.ಮೀ.ನಲ್ಲಿನ ಅಕ್ವೆಡಕ್ಟ್‌ಗೆ ಸಂಬಂಧಪಟ್ಟ ಕಾಮಗಾರಿಗಳು ಪ್ರಗತಿಯಲ್ಲಿವೆ.
ಆ) 12.00 ಕೋಟಿ ರೂಪಾಯಿಗಳು.
ಇ) ಸರ್ವೆ ಕೆಲಸ ನಡೆಯುತ್ತಿದ್ದು, ಇದು ಪೂರ್ಣಗೊಂಡ ನಂತರ ಸದರಿ ಯೋಜನೆಯಿಂದ ಉಪಯೋಗ ಪಡೆಯುವ ಗ್ರಾಮಗಳನ್ನು ಗುರುತಿಸಬಹುದಾಗಿದೆ.
ಈ) ಈ ಯೋಜನೆಯನ್ನು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ವಿಷಯ : ಧಾರವಾಡ ಕಾರ್ಯಕಾರಿ ವಿಭಾಗಗಳಿಗೆ ಎಲ್. ಓ. ಸಿ.

Q : 1425

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಮುಖ್ಯ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಇವರ ಅಧೀನದಲ್ಲಿ ಬರುವ ಕಾರ್ಯಕಾರಿ ಅಭಿಯಂತರ ವಿಭಾಗಗಳು ಎಷ್ಟು?
ಆ) 1992-93ನೇ ಸಾಲಿನಲ್ಲಿ ಈ ಮುಖ್ಯ ಇಂಜಿನಿಯರ್ ವಿಭಾಗಕ್ಕೆ ಸರ್ಕಾರದಿಂದ ಬಂದಿರುವ ಎಲ್. ಓ. ಸಿ. ಎಷ್ಟು?
ಇ) ಎಲ್. ಓ. ಸಿ. ಬಂದ ಹಣದಲ್ಲಿ ಮುಖ್ಯ ಇಂಜಿನಿಯರ್ ಯಾವ ಯಾವ ಕಾರ್ಯಕಾರಿ ಇಂಜಿನಿಯರ್ ವಿಭಾಗದವರಿಗೆ ಎಷ್ಟೆಷ್ಟು ಹಣವನ್ನು ಯಾವಾಗ ಬಿಡುಗಡೆ ಮಾಡಿರುವುದು (ಸಂಪೂರ್ಣ ವಿವರ ಕೊಡುವುದು)
ಈ) ಎಲ್.ಓ.ಸಿ.ಯನ್ನು ಮೆಟೇರಿಯಲ್ ಕಾಂಪೊನೆಂಟ್ ಸಲುವಾಗಿ ಎಷ್ಟು ಖರ್ಚಾಗಿರುವುದು ; ಉಳಿದ ಅಭಿವೃದ್ಧಿ ಕೆಲಸಗಳಿಗೆ ಖರ್ಚಾಗಿರುವ ಹಣ ಎಷ್ಟು?
ಉ) ಪ್ರತಿಯೊಂದು ಕಾರ್ಯಕಾರಿ ಇಂಜಿನಿಯರಿಂಗ್ ವಿಭಾಗದವರಿಗೆ ಸರಿಯಾಗಿ ಎಲ್. ಓ. ಸಿ. ಕೊಡುವಂತೆ ಸರ್ಕಾರದವರು ಮುಖ್ಯ ಇಂಜಿನಿಯರ್‌ರಿಗೆ ಆದೇಶ ನೀಡಿರುವರೇ?